# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

## ಸತ್ರ ಮೊಕದ್ದಮೆ ನಂಃ 77/2024

| | | |
|---|---|---|
| ಸಾಕ್ಷಿದಾರರ ಹೆಸರು | - ಮೀನಾಕ್ಷಮ್ಮ | ಪಿಡಬ್ಲ್ಯೂ- 02 |
| ಗಂಡನ ಹೆಸರು | - ಬಸವರಾಜಯ್ಯ | ಸಿಡಬ್ಲ್ಯೂ -04 |
| ವಯಸ್ಸು | - 56 ವರ್ಷ | |
| ಉದ್ಯೋಗ | - ಗೃಹಿಣಿ | |
| ವಾಸ ಸ್ಥಳ | - ಎಂ.ಸಿ.ಹಳ್ಳಿ | |

ದಿನಾಂಕಃ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

## ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ಈ ಹಿಂದೆ ನೋಡಿಲ್ಲ. ಫ್ರಾಸಾ.1 ನನ್ನ ಸೊಸೆ. ಚಾಸಾ.5 ನನ್ನ ಮಗ. ಚಾಸಾ.6 ಮತ್ತು 7 ಗೊತ್ತು, ಅವರು ನಮ್ಮ ಊರಿನವರು.

2. ಆರೋಪಿತರಿಂದ ನನಗೆ ಯಾವುದೇ ತೊಂದರೆ ಆಗಿಲ್ಲ. ಆ ಬಗ್ಗೆ ಫ್ರಾಸಾ.1 ರವರು ಆರೋಪಿತರ ವಿರುದ್ಧ ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

3. ಪೊಲೀಸರು ನನ್ನನ್ನು ಯಾವುದೇ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ

ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 22-02-2021 ರಂದು ಸಂಜೆ 4.30 ಗಂಟೆಗೆ ನಾನು ಮತ್ತು ಫ್ರಾಸಾ.1 ರವರು ಮನೆಯಲ್ಲಿರುವಾಗ ನಮ್ಮ ಮನೆಯ ಹಿಂದಿನ ಖಾಲಿ ಜಾಗದಲ್ಲಿ ನಾವುಗಳು ಅಡಿಕೆ ಸಸಿಗಳನ್ನು ಇಟ್ಟಿದ್ದು ಅಲ್ಲಿಗೆ ಆರೋಪಿತರು ಬಂದು ನನ್ನನ್ನು ಕರೆದು ಅಡಿಕೆ ಸಸಿಗಳನ್ನು ಯಾರು ಇಲ್ಲಿ ಇಟ್ಟಿದ್ದು ಇದು ನಮ್ಮ ಜಾಗ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ ನಾನು ಅಡಿಕೆ ಸಸಿಗಳು ನಮ್ಮದೇ ಅವುಗಳನ್ನು ನಾವು ನಮ್ಮ ಮನೆಯ ಹಿಂದೆ ಇಟ್ಟಿದ್ದೇವೆ ಎಂದು ಹೇಳಿದೆನು ಎಂದರೆ ಸರಿಯಲ್ಲ.

5. ನಂತರ ನಾನು ನಮ್ಮ ಅಂಗಡಿಗೆ ಹೋದೆನು ಎಂದರೆ ಸರಿಯಲ್ಲ. ನಂತರ ಆರೋಪಿತರು ನಮ್ಮ ಅಂಗಡಿಯ ಬಳಿ ಬಂದು ನನ್ನನ್ನು ಕುರಿತು, ಆ ಜಾಗ ನಮ್ಮದು, ನೀವು ಅಡಿಕೆ ಸಸಿಗಳನ್ನು ತೆಗೆದುಕೊಳ್ಳಿ ಎಂದು ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ಆಗ ನಾನು ನಮ್ಮ ಅಂಗಡಿಯಿಂದ ಹೊರಗೆ ಬಂದಾಗ ಆರೋಪಿತರು ನನ್ನನ್ನು ಕುರಿತು, ಸೂಳೆಮುಂಡೆ, ಬೇವರ್ಸಿ ಮುಂಡೆ ಎಂದು ಬೈದು ನನ್ನ ಸೀರೆಯನ್ನು ಹಿಡಿದು ಎಳೆದಾಡಿ ಹರಿದರು ಎಂದರೆ ಸರಿಯಲ್ಲ. ನೀವು ಅಡಿಕೆ

ಸಸಿಗಳನ್ನು ತೆಗೆದುಕೊಳ್ಳದಿದ್ದರೆ ನಿಮ್ಮನ್ನು ಉಳಿಸುವುದಿಲ್ಲ, ನಾವು ನಿಮ್ಮ ಕುಟುಂಬದವರನ್ನು ನಾಶ ಮಾಡುತ್ತೇವೆ ಎಂದು ಆರೋಪಿತರು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನೀವೇನಾದರು ಪೊಲೀಸರಿಗೆ ದೂರು ನೀಡಿದರೆ ನಿಮ್ಮ ಮೇಲೆ ಜಾತಿ ನಿಂದನೆ ಕೇಸು ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ಫ್ರಾಸಾ.1 ರವರು ನನ್ನನ್ನು ಮನೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ.

6. ನಂತರ ಗ್ರಾಮದ ಮುಖಂಡರಿಗೆ ಗಲಾಟೆಯ ಬಗ್ಗೆ ತಿಳಿಸಿ ಮಾತನಾಡಿದ್ದರೂ ಸಹ ಸಮಸ್ಯೆ ಬಗೆಹರಿಯದ ಕಾರಣ ತಡವಾಗಿ ಫ್ರಾಸಾ.1 ರವರು ತರೀಕೆರೆ ಪೊಲೀಸರಿಗೆ ಆರೋಪಿತರ ವಿರುದ್ಧ ದೂರನ್ನು ನೀಡಿದರು ಎಂದರೆ ಸರಿಯಲ್ಲ.

7. ನಂತರ ದಿಃ 19-03-2021 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

8. ಅದೇ ದಿನ ಪೊಲೀಸರು ನನ್ನನ್ನು ತರೀಕೆರೆ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.

9. ಆರೋಪಿತರು ನಿಮ್ಮ ಮತ್ತು ಇತರರ ವಿರುದ್ಧ ನೀಡಿರುವ ದೂರಿನ ಮೇರೆಗೆ ಇದೇ ನ್ಯಾಯಾಲಯದಲ್ಲಿ ಸ್ಪೆಷಲ್ ಸಿ.138/2021 ರಲ್ಲಿ ಪ್ರಕರಣ ದಾಖಲಾಗಿ ವಿಚಾರಣೆಯಲ್ಲಿದ್ದು ನೀವು ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಂಡಿರುವ ಕಾರಣ ಈ ಪ್ರಕರಣದಲ್ಲಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ